ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ಕಬ್ಬು ಬೆಳೆಗಾರರ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸಬೇಕು.

(ಗೊಂದಲ)

ಅಧ್ಯಕ್ಷರು:– ಸ್ವಲ್ಪ ತಾಳ್ಮೆಯಿಂದಿರಿ, ಈ ಸದನವು ಅಂಗೀಕರಿಸಿದ ಸಂತಾಪ ಸೂಚನೆ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಿಕೊಡಲಾಗುವುದು.

2. ಪ್ರಕಟಣೆ

ವಿಷಯ: ವಿಧಾನ ಸಭೆಯ ಅಧಿವೇಶನದ ಸಂದರ್ಭದಲ್ಲಿ ವಿಧಾನಸಭೆ ಸಭಾಂಗಣದಲ್ಲಿ ಮೊಬೈಲ್ ನಿಷೇದಿಸಿರುವ ಬಗ್ಗೆ.

ಇನ್ನೊಂದು ವಿಧಾನಸಭೆಯ ಅಧಿವೇಶನದ ಸಂದರ್ಭದಲ್ಲಿ ವಿಧಾನಸಭೆಯ ಸಭಾಂಗಣದೊಳಗೆ ಮೊಬೈಲ್‌ಗಳ ಬಳಕೆಯನ್ನು ನಿಷೇದಿಸಲಾಗಿರುವುದರಿಂದ ಮಾನ್ಯ ಸದಸ್ಯರುಗಳು ತಮ್ಮ ಮೊಬೈಲ್‌ಗಳನ್ನು ವಿಧಾನಸಭೆಯ ಆಡಳಿತ ಪಕ್ಷದ ಮೊಗಸಾಲೆ ಮತ್ತು ವಿಧಾನಸಭೆಯ ವಿರೋಧ ಪಕ್ಷದ ಮೊಗಸಾಲೆಗಳಲ್ಲಿರುವ ಕೊಠಡಿಗಳಲ್ಲಿನ ಮಾರ್ಷಲ್‌ರವರ ಸಿಬ್ಬಂದಿಗಳ ಬಳಿ ನೀಡಿ ಸದಸ್ಯರು ಸದನದೊಳಗೆ ಪ್ರವೇಶಿಸಬೇಕೆಂದು ಎಲ್ಲಾ ಮಾನ್ಯ ಸದಸ್ಯರುಗಳಿಗೆ ಈ ಮೂಲಕ ತಿಳಿಸಲಾಗಿದೆ.

3. ಕಬ್ಬು ಬೆಳೆಗಾರರ ಸಮಸ್ಯೆಗಳಿಗೆ ಮಾನ್ಯ ಸಹಕಾರ ಹಾಗೂ ಸಕ್ಕರೆ ಸಚಿವರಿಂದ ಸಮರ್ಪಕವಾದ ಉತ್ತರ ಬಾರದಿರುವ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಮಹದೇವ ಪ್ರಸಾದ್ ರವರು ಹೇಳಿದ ಉತ್ತರ ಸಮಾಧಾನ ತರಲಿಲ್ಲ.

(ಗೊಂದಲ)

ಅಧ್ಯಕ್ಷರು:– ಒಂದು ನಿಮಿಷ. ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಂಡಿದ್ದೇನೆ. ಇದನ್ನು ಮುಕ್ತಾಯಗೊಳಿಸುವುದಕ್ಕೆ ಈ

ಸಂದರ್ಭದಲ್ಲಿ ಅವರಿಂದ ಎರಡು ಮಾತುಗಳು ಬರಲಿ ಎಂದು ವಿನಂತಿ ಮಾಡುತ್ತೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು):– ಬಾವಿಯಲ್ಲಿ ನಿಂತುಕೊಂಡರೆ ನಾವೇನು ಮಾಡುವುದು?

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದಾದರೆ ನಾವು . . . .

ಶ್ರೀ ಸಿದ್ದರಾಮಯ್ಯ:– ಉತ್ತರವೇನಿಲ್ಲ. ಅವರು ಉತ್ತರ ಕೊಟ್ಟಿದ್ದಾರೆ. 200/– ರೂ.ಗಳನ್ನು ನಂತರ ಕೊಡುತ್ತಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಕೆಲವು ವಿಷಯಗಳಿಗೆ ಸ್ಪಷ್ಟೀಕರಣ ಕೇಳಿದ್ದು, ಮಹದೇವ ಪ್ರಸಾದ್‌ರವರು ಸರಿಯಾಗಿ ಉತ್ತರ ಕೊಡಲಿಲ್ಲ. ಹಾಗೆ vague ಆಗಿ ಉತ್ತರ ಕೊಟ್ಟರು. 2,300/– ರೂ.ಗಳ ಬಗ್ಗೆ ಹೇಳಿದ್ದೀರಿ, ಬಾಕಿ 200/– ರೂ.ಗಳನ್ನು ಯಾವ ಕಂತಿನಲ್ಲಿ ಎಷ್ಟು ದಿವಸಗಳಲ್ಲಿ ಕೊಡುತ್ತೀರಿ ಎಂಬ ಬಗ್ಗೆ ಸ್ಪಷ್ಟವಾಗಲಿಲ್ಲ. ಅದಕ್ಕೆ ನೀವು ಸ್ಪಷ್ಟೀಕರಣವನ್ನೇ ಕೊಡಲಿಲ್ಲ. ಸಮಾಧಾನಕರವಾದ ರೀತಿಯಲ್ಲಿ ಉತ್ತರ ಕೊಡಲಿಲ್ಲ. ಇಲ್ಲಿಯವರೆಗೆ ಬಂದು ಬೆಳಗಾವಿಯಲ್ಲಿ ಅಧಿವೇಶನ ಮಾಡಿ ಏನು ಪ್ರಯೋಜನ? ಅಧ್ಯಕ್ಷರೆ, ಸೋಮವಾರ ಮುಖ್ಯಮಂತ್ರಿಗಳು ಅದರ ಬಗ್ಗೆ ಉತ್ತರ ಕೊಡುತ್ತಾರೆಂದು ನೀವು ಹೇಳಿದಿರಿ. ಶನಿವಾರ ಶರಣ ಸಾಹಿತ್ಯ ಸಮ್ಮೇಳನಕ್ಕೆ ಹೋಗುವಾಗ ಮುಖ್ಯಮಂತ್ರಿಗಳು ಏನೇ ಆಗಲಿ ಸೋಮವಾರ ಹೇಳುತ್ತೇನೆಂದು ಹೇಳಿದ್ದರು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಸಕ್ಕರೆ ಕಾರ್ಖಾನೆಯ ಮಾಲೀಕರು ಸಹ ಇವರಲ್ಲಿ ಸ್ಪಷ್ಟವಾಗಿ ಮಾತನಾಡಬೇಕು. 2,100/– ರೂ.ಗಳನ್ನು ಎಲ್ಲಾ ಸಕ್ಕರೆ ಕಾರ್ಖಾನೆಯವರೂ ಕೊಟ್ಟಿಲ್ಲ. 2,300/– ರೂ.ಗಳನ್ನೂ ಕೊಡಲಿಲ್ಲ. ಅದರ list ಕೊಡಿ ಎಂದು ನಾವು ಕೇಳಿದೆವು. 2,100/– ರೂ.ಗಳನ್ನು ಎಷ್ಟು ಕಾರ್ಖಾನೆಯವರು ಕೊಟ್ಟಿದ್ದಾರೆ? 2,300/– ಎಷ್ಟು ಕಾರ್ಖಾನೆಗಳವರು ಕೊಟ್ಟಿದ್ದಾರೆ? ನವೆಂಬರ್ 7ನೇ ತಾರಿಖಿನೊಳಗೆ ಕೊಡಬೇಕಿತ್ತಲ್ಲ, ಕೊಡಲಿಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಅದನ್ನು ಈಗ place ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:– ಇವತ್ತು ಕೊಡಬೇಕಿತ್ತಲ್ಲ, ಕೊಡಲಿಲ್ಲ. ಅಂದರೆ ಇಂದು ಕೆಲವೊಂದು facts ಗಳನ್ನು ಮುಚ್ಚಿ ಹಾಕುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ನೀವೇನು ಮಾಡುತ್ತಿದ್ದೀರಲ್ಲ, sugar ಲಾಭಿಗೆ ಮಣಿಯುವ ಕೆಲಸ ಇಂದು ಆಗುತ್ತಿದೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಮಾನ್ಯ ಅಧ್ಯಕ್ಷರೆ, ಯಾವುದೇ ವಿಚಾರಗಳನ್ನು ಮುಚ್ಚಿಡುವ ಪ್ರಶ್ನೆ ಇಲ್ಲ. ಯಾವ್ಯಾವ ಕಾರ್ಖಾನೆಯವರು ಎಷ್ಟೆಷ್ಟು ಹಣವನ್ನು ಈವರೆಗೆ ಪಾವತಿ ಮಾಡಿದ್ದಾರೆ, ಅದರ statement ಇದೆ. ಆ statement ಅನ್ನು ನಾನು ಈ ಸದನದಲ್ಲಿ ಮಂಡಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:– ಇವತ್ತು ಕೆಲವರು 1,800/– ರೂ. ಕೊಟ್ಟಿದ್ದಾರೆ. ಕೆಲವರು 2,000/– ರೂ.ಗಳನ್ನು ಕೊಟ್ಟಿದ್ದಾರೆ. 2,100/– ಕೊಟ್ಟಿದ್ದಾರೆ. ಆ list ಕೊಡಿ ಎಂದು ನಾವು ಕೇಳಿದೆವು. ಅದನ್ನೂ ಅವರು ಕೊಡಲಿಲ್ಲ. ನೀವು ಆ list ಅನ್ನು ಸದನದಲ್ಲಿ ಮಂಡನೆ ಮಾಡಿ. 2,300/– ರೂ.ಗಳನ್ನು ಕೊಟ್ಟು ಉಳಿದ 200/– ರೂ.ಗಳನ್ನು ಯಾವಾಗ ವಸೂಲಿ ಮಾಡಿ ಕೊಡುತ್ತೀರಿ? ಎಷ್ಟು ವರ್ಷ ಬೇಕು? ಅದನ್ನು ಹೇಳಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಮಾನ್ಯ ಅಧ್ಯಕ್ಷರೆ, 60 ಕಾರ್ಖಾನೆಗಳವರೂ 31.10.2014 . . .

ಶ್ರೀ ಜಗದೀಶ್ ಶೆಟ್ಟರ್:– ನೋಡಿ ಅದರ ಕಾಪಿ ಕಳುಹಿಸಿಕೊಡಿ. ನಾವು ಮೊನ್ನೆ ದಿನವೇ ಕೇಳಿದೆವು.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– 31.10.2014 ರವರೆಗೆ ಯಾರು ಕೊಟ್ಟಿದ್ದಾರೆ ಎಂಬುದು ಇದೆ. ಅದನ್ನು ಕಾಪಿ ಮಾಡಿ ಈಗ ಎಲ್ಲರಿಗೂ ಕಳುಹಿಸಿಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:– ಇವತ್ತು ಬೆಳಿಗ್ಗೆಯೇ ಕೊಡಬೇಕಿತ್ತು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ನಾನು ಮೊನ್ನೆಯೇ ಕೊಡಲು ತಯಾರಿದ್ದೆ. ಅಷ್ಟರಲ್ಲಿ ಅವರು. .

ಶ್ರೀ ಜಗದೀಶ್ ಶೆಟ್ಟರ್:– ಮೊನ್ನೆ ಅಲ್ಲ, ಇಂದು ಬೆಳಿಗ್ಗೆ ಕೊಡಬೇಕಿತ್ತು, ಕೊಡಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಕೊಡುತ್ತೇವೆ.

ಅಧ್ಯಕ್ಷರು:– ಸದನಕ್ಕೆ ಕೊಡಿ.

ಶ್ರೀ ಜಗದೀಶ್ ಶೆಟ್ಟರ್:– ಬೆಳಿಗ್ಗೆ ಕೊಡಬೇಕಿತ್ತು. ನಾವು ಧರಣಿ, ಸತ್ಯಾಗ್ರಹ ಮಾಡುತ್ತಿದ್ದೇವೆ. ನಿಮಗೆ ಮೊನ್ನೆ ನಾವುಗಳು ಧರಣಿ, ಸತ್ಯಾಗ್ರಹ ಮಾಡಿರುವುದು ಗೊತ್ತಿದೆ. ಒಂದು ಸ್ಪಷ್ಟೀಕರಣ ಇಲ್ಲವಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಬಾಕಿ ಇರುವ ವಿಚಾರದಲ್ಲಿ ನಮಗೆ ಯಾವುದೇ ಮುಚ್ಚುಮರೆ ಇಲ್ಲ. 1728 ಕೋಟಿ ರೂ. ಬಾಕಿ ಇದೆ ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಿದ್ದೇವೆ. ಫ್ಯಾಕ್ಟರಿಗಳು 1650 ರಿಂದ ಹಿಡಿದು 2450/– ರೂ.ಗಳವರೆಗೆ ಒಂದೊಂದು ಹಂತದಲ್ಲಿ payment ಮಾಡಿದ್ದಾರೆ. ಉಳಿದಿರುವ ಹಣದಲ್ಲಿ 2300/– ರೂ.ಗಳನ್ನು ನಾವು ಡಿಸೆಂಬರ್ ಅಂತ್ಯದೊಳಗೆ ಕೊಡಿಸುತ್ತೇವೆ. ಇನ್ನು ಉಳಿದ 200/– ರೂ.ಗಳನ್ನು 60 ಫ್ಯಾಕ್ಟರಿಗಳವರು ಕಬ್ಬಿನ crushing ಅರಿಯುತ್ತಿರುವುದರಿಂದ ಈ

ಹಂತದಲ್ಲಿ ಆ 200/– ರೂ.ಗಳ ಬಗ್ಗೆ ನಾವು ಒಂದು ಸಭೆ ಮಾಡಿ ಎರಡು ಕಂತಿನಲ್ಲಿ ಕೊಡಿಸಲು ಎಲ್ಲಾ ರೀತಿಯ ಕ್ರಮವನ್ನು ಕೈಗೊಂಡು ರೈತರಿಗೆ 2,500/– ರೂ.ಗಳನ್ನು ಏನು ನಿಗದಿ ಮಾಡಿದ್ದೇವೆ, ಅದನ್ನು ಕೊಡಿಸುತ್ತೇವೆ. ಇದರಲ್ಲಿ ಸಂಶಯ ಪಡುವ ಅಗತ್ಯವಿಲ್ಲ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:– ಈಗ 2,500/– ರೂ.ಗಳಿಗೆ ನೀವು 2300/– ರೂ.ಗಳನ್ನು ಡಿಸೆಂಬರ್ ತಿಂಗಳೊಳಗೆ clear ಮಾಡುತ್ತೇವೆಂದು ಹೇಳಿದಿರಿ. ಪ್ರಶ್ನೆ ಬಂದಿರುವುದು 200/– ರೂ.ಗಳದ್ದು. ನಮ್ಮದಿಷ್ಟೆ, ಈಗ ನಾವು ಒಂದು ವರ್ಷ ಹೋದ ಅಧಿವೇಶನದಲ್ಲಿ ಆದ ಮೇಲೆ ಅದು ಚರ್ಚೆಯಾಗಿದೆ. ಅದನ್ನು ನಾವು ಹೇಳುವುದಿಲ್ಲ. ಒಂದು ವರ್ಷ ಏಕೆ delay ಆಯಿತು? ಕೋರ್ಟಿಗೆ ಹೋದರು, ಕಚೇರಿಗೆ ಹೋದರು, stay ಬಂತು, ಮಣ್ಣು ಬಂತು, ಮಸಿ ಬಂತು ಎನ್ನುವುದು ಬೇಡ. ನವೆಂಬರ್–6 ರ ನಂತರ ಈಗ ಮಾರ್ಗ ಸಲೀಸಾದ ಮೇಲೆ ವಸೂಲಿಯಾದರೂ ಮಾಡಿಕೊಡಬೇಕಿತ್ತು, ಇಲ್ಲವೆ ನೀವಾದರೂ ಕೊಡಬೇಕಿತ್ತು. ಈಗ ವಸೂಲು ಮಾಡಲು ಏನು ತೊಂದರೆ ಎಂಬುದೆಲ್ಲಾ ಚರ್ಚೆಯಾಗಿದೆ. ಮುಖ್ಯವಾಗಿ ಇಂದು ನಾವು ಬಾವಿಯೊಳಗೆ ಬಂದು ಕಲಾಪವನ್ನು ಅಡ್ಡಿ ಮಾಡಿಕೊಳ್ಳುವುದಕ್ಕೆ ನಮಗೂ ಇಷ್ಟವಿಲ್ಲ. ಮುಖ್ಯವಾಗಿ ನಾನು ಇಂದು ಬೆಳಿಗ್ಗೆ ಮಾನ್ಯ ಸಭಾಧ್ಯಕ್ಷರ ಜೊತೆ ಅವರ ಕೊಠಡಿಯಲ್ಲಿ ಮಾತನಾಡಿದಾಗ ನಮ್ಮೆಲ್ಲರ ಆತಂಕ, ಕಾಳಜಿ, ಬದ್ಧತೆ, ಇವತ್ತು ಉತ್ತರ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ನಾವು ಬಹಳ ಕಾಳಜಿ ತಾಳಬೇಕಾಗಿದೆ, ನಮಗೆ ಬದ್ಧತೆ ಇದೆ. ಚರ್ಚೆಯಾಗಬೇಕಿದೆ. ಇವತ್ತು, ನಾಳೆ ಅದರ ಬಗ್ಗೆ ಸಮಗ್ರ ಚರ್ಚೆಯಾಗಬೇಕೆಂಬುದು ನಮ್ಮ ಅಪೇಕ್ಷೆ. ಆದುದರಿಂದ ನೀವು ಕೂಡ ಅಷ್ಟೇ ಕಾಳಜಿ, ಬದ್ಧತೆ ತೋರಿಸಿ, ಸುಮ್ಮನೆ ವೃತಾ ಕಾಲಹರಣ ಮಾಡುವುದರ ಬದಲು, ₹ 2,300 ಜೊತೆಗೆ ಡಿಸೆಂಬರ್ ತಿಂಗಳೊಳಗೆ ಆ ₹ 200 ಸೇರಿಸಿ ನಾವು ಕೊಡುತ್ತೇವೆ, ಅದನ್ನು ಹೇಗೆ ತರುತ್ತೇವೆಯೊ, ಎಲ್ಲಿಂದ ತರುತ್ತೇವೆಯೋ, ಆ ಕಾರ್ಖಾನೆ ಮಾಲೀಕರನ್ನು ಸದೆಬಡಿದು ತರುತ್ತೇವೆಯೋ ಅಥವಾ ಹಿಡಿದು ಎಳೆದುಕೊಂಡು ಬರುತ್ತೀರೋ, ಅದು ನಮಗೆ ಗೊತ್ತಿಲ್ಲ.

ಇಷ್ಟೇ ಮಾಡಿದ್ದೀರಾ, ಇವತ್ತು ಒಂದು ಸಂದೇಶ ರವಾನೆಯಾಗುತ್ತದೆ, ರೈತರಿಗೆ ಒಂದು ಖುಷಿಯಾಗುತ್ತದೆ, ಬೆಳಗಾವಿ ಅಧಿವೇಶನ ಮಾಡಿದ್ದಕ್ಕೆ ಆ ಶ್ರೇಯಸ್ಸು, ಕೀರ್ತಿ ನಿಮಗೆ ಬರುತ್ತದೆ. ₹ 2,300 ಜೊತೆ ₹ 200 ಅನ್ನು ಸೇರಿಸಿ ಕೊಡುತ್ತೇವೆ ಎನ್ನುವ ಧಾರಳತನವನ್ನು ತೋರಿಸಿ ಮುಂದಿನ ಚರ್ಚೆಗೆ ಅವಕಾಶ ಮಾಡಿಕೊಡಿ, ಒಳ್ಳೆಯದಾಗುತ್ತದೆ.

ಶ್ರೀ ಲಕ್ಷ್ಮಣ್ ಎಸ್. ಸವದಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಒಂದು ಹೇಳಿಕೆ ಮಾಡಿದರು, ಅದೇನೆಂದರೆ, ನಾವು ಈ ತಿಂಗಳ ಕೊನೆಯೊಳಗೆ ಸ್ವಲ್ಪ ಜನರಿಗೆ ಸಂದೇಶ ಕಳುಹಿಸುತ್ತೇವೆ, ಮಾರ್ಚ್‌ಯೊಳಗೆ ₹ 200 ಕೊಡುತ್ತೇವೆ ಎನ್ನುವುದು. ತದನಂತರ ಇವರು ಹೇಳಿರುವ ಅಂಕಿಅಂಶಗಳನ್ನು ನೋಡಿದರೆ, ಕೇವಲ ₹ 2,000 ಕೊಟ್ಟಿರುವವರಿಗೆ ಇನ್ನು ₹ 200 ಅನ್ನು ಮಾರ್ಚ್‌ಯೊಳಗೆ ಕೊಡಿಸುತ್ತೇವೆಂದು ಹೇಳಿದರು, ಉಳಿದಿರುವುದನ್ನು ಮುಂದಿನ ದಿವಸಗಳಲ್ಲಿ ಯಾವಾಗ ಕೊಡಿಸುತ್ತೇವೆನ್ನುವ ಸಮಯನ್ನು ಹೇಳಲಿಲ್ಲ. ಅದರ ಜೊತೆಗೆ ಕೆಲವೊಂದು ಸಕ್ಕರೆ ಕಾರ್ಖಾನೆಯವರು ₹ 1,800 ಕೊಟ್ಟಿದ್ದಾರೆ, ಅವರ ಬಗ್ಗೆ ಇಲ್ಲಿ ಪ್ರಸ್ತಾಪವೇ ಬರಲಿಲ್ಲ. ಈಗಾಗಲೇ ₹ 1,800 ಕೊಟ್ಟಿದ್ದಾರೆ, ಕೇವಲ ₹ 2,000 ಕೊಟ್ಟಿರುವ ಕಾರ್ಖಾನೆಗಳ ಬಗ್ಗೆ ಮಾತ್ರ ಉತ್ತರವನ್ನು ಹೇಳಿದ್ದಾರೆ, ₹ 1,800 ಕೊಟ್ಟಿರುವವರ ಬಗ್ಗೆ ಏನು ಮಾಡುತ್ತಾರೆನ್ನುವ ಬಗ್ಗೆ ಪ್ರಸ್ತಾವೇ ಇಲ್ಲ. ಇದು ಕಳೆದ ವರ್ಷದ ಕಥೆ ಇದರ ಜೊತೆಗೆ ಈ ವರ್ಷ ಪ್ರಾರಂಭವಾಗಿ ಸುಮಾರು ಒಂದು ತಿಂಗಳಾಯಿತು, ಒಂದೊಂದು ಕಾರ್ಖಾನೆಯವರು 1 ಲಕ್ಷ, 2 ಲಕ್ಷ, 3 ಲಕ್ಷ ಕ್ರಸ್ ಮಾಡಿರುತ್ತಾರೆ, ಈ ವರ್ಷದ್ದು ಕೂಡ ರೈತನಿಗೆ ಕೊಡಲೇ ಇಲ್ಲ.

ಅಧ್ಯಕ್ಷರು:– ದಯವಿಟ್ಟು ಮತ್ತೆ ಹಿಂದಕ್ಕೆ ಹೋಗಬೇಡಿ. ಬಾಕಿ ಇರುವ ಹಣವನ್ನು ಕೊಡಿ ಎನ್ನುವ ಬಗ್ಗೆ ಅಷ್ಟಕ್ಕೆ ಸೀಮಿತವಾಗಿ ಹೇಳಿ.

ಶ್ರೀ ಲಕ್ಷ್ಮಣ್ ಎಸ್. ಸವದಿ:– ಅಷ್ಟನ್ನು ಹೇಳುತ್ತೇನೆ, ತಾವು ಹೇಳಿದಂತೆ ಕಳೆದ ಅಧಿವೇಶನದಲ್ಲಿ ಖಂಡಿತವಾಗಿಯು ಕಬ್ಬು ಬೆಳೆಗಾರರಿಗೆ

₹ 2,500 ಕೊಡಿಸಿಯೇ ತೀರುತ್ತೇವೆ ಎಂದು ಹೇಳಿದಿರಲ್ಲಾ, ಅದನ್ನು ಹೇಳುವಂಥದ್ದಾಗಬೇಕು ಅಷ್ಟೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಮಾನ್ಯ ಅಧ್ಯಕ್ಷರೆ, ವಿಷಯ ಇಷ್ಟೆ, ನಾನು ಹಿಂದಿನ ವಿಷಯವನ್ನು ಮಾತನಾಡುವುದಕ್ಕೆ ಹೋಗುವುದಿಲ್ಲ. ₹ 2,500 ಒಂದೇ ಹಿಡಿಗಂಟಿನಲ್ಲಿ ಕೊಡುವಂಥ ಕೆಲಸವಾಗಬೇಕು ಮತ್ತು ಹಳೆಯ ಬಾಕಿಯನ್ನು ತ್ವರಿತವಾಗಿ ಕೊಡಿಸಬೇಕು. ಎರಡೇ ವಿಷಯ ಬೇರೆ ಏನು ಇಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಸಹಕಾರ ಮತ್ತು ಸಕ್ಕರೆ ಸಚಿವರು):– ಮಾನ್ಯ ಅಧ್ಯಕ್ಷರೆ, ನಾನೇನು ಮೊನ್ನೆ ಉತ್ತರ ಕೊಡುವಾಗ ತಿಳಿಸಿದ್ದೇನೆ, ಅದನ್ನೇ ನಾನು ಪುನರುಚ್ಚಾರ ಮಾಡಿ ಹೇಳಬೇಕಾಗಿದೆ. ಮಾನ್ಯ ಸದಸ್ಯರಾದ ಲಕ್ಷ್ಮಣ ಸವದಿಯವರು ₹ 1,800 ಬಗ್ಗೆ ಮಾತನಾಡಿಲ್ಲವೆಂದು ಹೇಳಿದರು, ಅದನ್ನೂ ಸೇರಿಸಿ, ಅಂದರೆ ಎಲ್ಲಾ ಕಾರ್ಖಾನೆಗಳಿಂದ ಕೂಡ ₹ 2,300 ಅನ್ನು ಈ ತಿಂಗಳ ಅಂತ್ಯದೊಳಗೆ ಕೊಡಿಸುತ್ತೇನೆ ಎನ್ನುವ ಮಾತನ್ನು ಉತ್ತರದಲ್ಲಿ ಹೇಳಿದ್ದೇನೆ. ₹ 2,000 ಕೊಟ್ಟವರಿಗೆ ₹ 1,800, ₹ 2,100 ಆ ರೀತಿ ಅದನ್ನು distinguish ಮಾಡಿಲ್ಲ. ಇನ್ನು ₹ 200 ಏನಿದೆ, ಆ ವಿಚಾರದಲ್ಲಿ ಈಗ ಕಬ್ಬು ಅರೆಯುವ ಕಾರ್ಯ ಪ್ರಾರಂಭವಾಗಿ ಎಲ್ಲಾ ಕಾರ್ಖಾನೆಗಳು ಆ ಕೆಲಸದಲ್ಲಿ ನಿರತವಾಗಿರುದರಿಂದ ನಾವು ಆ ₹ 200 ಬಗ್ಗೆ ಚರ್ಚೆ ಮಾಡಿ ಆದಷ್ಟು ಶೀಘ್ರವಾಗಿ ಅದನ್ನು ಕೊಡಿಸುವುದಕ್ಕೆ ಈಗಲೂ ಕೂಡ ಮಾನ್ಯ ಮುಖ್ಯಮಂತ್ರಿಗಳೊಡನೆ ಮಾತನಾಡಿದ್ದೇವೆ, ಆ ₹ 200 ಅನ್ನು ಖಂಡಿತವಾಗಿಯೂ ರೈತರಿಗೆ pass on ಮಾಡಿಸುತ್ತೇವೆ ಆ ಬಗ್ಗೆ ಯಾವುದೇ ಸಂಶಯ ಪಡುವ ಅವಶ್ಯಕತೆ ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಮಹದೇವ ಪ್ರಸಾದ್ ಅವರೆ, ಒಂದು ವರ್ಷವಾಯಿತು, ಅದಕ್ಕೆ ಒಂದು time bound ಹಾಕಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಸರ್, 14 ದಿವಸಗಳಲ್ಲಿ ಪೇಮೆಂಟ್ ಮಾಡಬೇಕೆಂದು ಕಾನೂನು ತಂದು ಒಂದು ವರ್ಷವಾಯಿತು.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:– ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಲಿ.

ಶ್ರೀ ಜಗದೀಶ್ ಶೆಟ್ಟರ್:– ಮೊನ್ನೆ ಮಾರ್ಚ್ ತಿಂಗಳೆಂದು ಹೇಳಿದರು.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಕಾರ್ಖಾನೆ ಮಾಲೀಕರೊಡನೆ ಕೈಜೊಡಿಸಿರುವುದು ಇದರಿಂದ ಸ್ಪಷ್ಟವಾಗುತ್ತದೆ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಮಾರ್ಚ್ ಅಂತ್ಯಕ್ಕೆ ಕ್ರಷಿಂಗ್ ಸಿಸನ್ ಮುಗಿಯುತ್ತದೆ, ಮುಗಿದ ತಕ್ಷಣ ಅವರಿಂದ ಇನ್ನುಳಿದ ₹ 200 ಕೊಡಿಸುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:– ಆ ₹ 200 ಅನ್ನು ಯಾವಾಗ ಕೊಡಿಸುತ್ತೀರೆಂದು ಹೇಳಿ?

ಶ್ರೀ ಹೆಚ್.ಎಸ್. ಮಹಾದೇವ ಪ್ರಸಾದ್:– ಮಾರ್ಚ್ ನಂತರ, ಮಾರ್ಚ್‌ನಿಂದ ಜೂನ್ ಒಳಗಡೆ ಇನ್ನು ₹ 200 ಕೊಡಿಸುತ್ತೇವೆ. ಅವರು ಈ ವರ್ಷದ ಕಬ್ಬಿಗೆ ಸಹ ಅವರು ಹಣ ಕೊಡಬೇಕಾಗಿದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಮುಂದಿನ ಅಧಿವೇಶನ, ನವೆಂಬರ್.

(ಗೊಂದಲ)

ಅಧ್ಯಕ್ಷರು:– ಮಾನ್ಯ ಸಚಿವರೆ, sugar factory owners ನಿಮ್ಮ ನೆಂಟರೇನೂ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಏನ್ರಿ, specific ಆಗಿ ಹೇಳಿ, ಮಾರ್ಚ್ ನಂತರ ಎಂದರೆ, ಮತ್ತೊಮ್ಮೆ ಅಧಿವೇಶನ ಬರಬೇಕಾಗುತ್ತದೆ. ಮಾರ್ಚ್ ನಂತರ ಎಂದರೆ, ಸೆಪ್ಟೆಂಬರೋ ಅಕ್ಟೋಬರೋ ಯಾವ ತಿಂಗಳೆಂಬುದನ್ನು specific ಆಗಿ ಹೇಳಿ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಮಾರ್ಚ್‌ನಿಂದ ಜೂನ್ ತಿಂಗಳೊಳಗೆ ಹಳೆ ಬಾಕಿಯನ್ನು ತೀರಿಸುವುದಕ್ಕೆ ನಾವೆಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಕ್ರಷಿಂಗ್ ಮುಗಿದ ಮೇಲೆ ಮುಂದಿನ ವರ್ಷ ಕ್ರಷಿಂಗ್ ಪ್ರಾರಂಭವಾಗುವುದರೊಳಗಡೆ ಹಳೆ ಬಾಕಿಯನ್ನೆಲ್ಲಾ ಕ್ಲಿಯರ್ ಮಾಡಿಸುತ್ತೇವೆ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:– ಕಳೆದ ಸಲ ಹುಕ್ಕೇರಿಯವರು ಹೇಳಿದಾಗಲು ಈ ಬಗ್ಗೆ ಮುಖ್ಯಮಂತ್ರಿಗಳೇ ಹೇಳಿದ್ದರು, ಈಗಲೂ ಮುಖ್ಯಮಂತ್ರಿಗಳೇ ಹೇಳಲಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ನಾವು ಹೇಳಿದರೆ ಉತ್ತರವಲ್ಲವೇ? ಮಾರ್ಚ್‌ನಿಂದ ಜೂನ್ ತಿಂಗಳೊಳಗೆ ಆ ₹ 200 ಕೊಡಿಸುವುದಕ್ಕೆ ನಾವು ಎಲ್ಲಾ ಕ್ರಮ ತೆಗೆದುಕೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಸಚಿವರೆ, ಮಾರ್ಚ್ ಒಳಗಡೆ..

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಮಾನ್ಯ ಅಧ್ಯಕ್ಷರೆ, ಮಾರ್ಚ್‌ನಿಂದ ಜೂನ್ ಈ ಮೂರು ತಿಂಗಳೊಳಗೆ ಕೊಡಿಸುತ್ತೇವೆಂದು ಹೇಳುತ್ತಿದ್ದೇವಲ್ಲ.

ಅಧ್ಯಕ್ಷರು:– ಕ್ರಷಿಂಗ್ ಆಗುವುದೆಲ್ಲಾ ಮಾರ್ಚ್ ಒಳಗಡೆ ಮುಗಿದು ಹೋಗುತ್ತದೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಮಾನ್ಯ ಅಧ್ಯಕ್ಷರೆ, ಅವರು ಜೂನ್ ಕೊನೆಗೆ year end account ಎಲ್ಲಾ ಕೊಡಬೇಕಾಗುತ್ತದೆ. ಆ ಮೂರು ತಿಂಗಳ ಗ್ಯಾಪ್‌ನಲ್ಲಿ ಹಿಂದಿನ ಬಾಕಿ ಏನಿದೆ, ಅದನ್ನು ಸಂಪೂರ್ಣ ಚುಕ್ತ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ..

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, SAP ಕಾನೂನಿನ ಪ್ರಕಾರ ವಸೂಲ್ಮಾಡುವುದಕ್ಕೆ ಇವರಿಗೆ ಎಲ್ಲಾ ಅಧಿಕಾರವಿದೆ, ಅದನ್ನು ವಸೂಲ್ಮಾಡುತ್ತಿಲ್ಲ, ಮಾರ್ಚ್ ಒಳಗೆ ವಸೂಲ್ಮಾಡುತ್ತೇವೆನ್ನುವ ಧೈರ್ಯನೂ ಇವರಿಗೆ ಇಲ್ಲ, ಸರ್ಕಾರ ಕೊಟ್ಟು, ಆಮೇಲೆ ಅವರಿಂದ ವಸೂಲ್ಮಾಡಲಿ. ಬಹುಶಃ ನನಗನಿಸುತ್ತದೆ, ವಸೂಲ್ಮಾಡುವುದಕ್ಕೆ ಬೆಳಗಾಂ ಅಧಿವೇಶನ ಬರಬೇಕಾಗುತ್ತದೆ..

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಕಾರ್ಖಾನೆ ಮಾಲೀಕರಿಂದ ಕೊಡಿಸುವುದಕ್ಕಾಗಲಿಲ್ಲವೆಂದರೆ ಸರ್ಕಾರದಿಂದ ಕೊಡಿಸಿ...

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಸರ್ಕಾರಕ್ಕೆ ಕಬ್ಬು ಬೆಳೆಗಾರರ ಬಗ್ಗೆ ಕಾಳಜಿಯೇ ಇಲ್ಲ, ಮುಖ್ಯಮಂತ್ರಿಗಳಿಂದ ಉತ್ತರವಿಲ್ಲ, ಮುಖ್ಯಮಂತ್ರಿಗಳು ಉತ್ತರ ಹೇಳುವುದಕ್ಕೂ ತಯಾರಿಲ್ಲ, ಈ ಬಗ್ಗೆ ಅಷ್ಟೊಂದು ನಿಷ್ಕಾಳಜಿ...

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಒಂದು ಸಕ್ಕರೆ ಕಾರ್ಖಾನೆ ಮಾನ್ಯ ಸದಸ್ಯರಾದ ಕಾರಜೋಳ ಅವರ ಭಾಗದಲ್ಲಿದೆ, ಮಾನ್ಯ ಸದಸ್ಯರಾದ ಉಮೇಶ್ ಕತ್ತಿಯವರ ಎರಡು ಸಕ್ಕರೆ ಕಾರ್ಖಾನೆಗಳಿವೆ, ಜೂನ್ ಒಳಗೆ ನಿಮ್ಮ ಕೈಯಲ್ಲಿ ಕೊಡಿಸುವುದಕ್ಕಾಗುತ್ತದೆಯೇ? ಸುಮ್ಮನೆ ಇಲ್ಲಿ ಬಂದು ಧರಣಿ ಕೂರುತ್ತೀರಿ, ಬಾಕಿ ಕೊಡುವುದಕ್ಕೆ ಕಾಲಾವಕಾಶ ಬೇಕೆನ್ನುತ್ತೀರಿ, ಯಾವ ರೀತಿ ಮಾಡುವುದು ಹೇಳಿ.

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಸಚಿವರ ಉತ್ತರದಿಂದ ನಿಮಗೆ ತೃಪ್ತಿಯಾಗದಿದ್ದರೆ, ನಾನು ಹೇಳುತ್ತೇನೆಂದು ಮುಖ್ಯಮಂತ್ರಿಗಳೇ ಹೇಳಿದ್ದರು, ಮುಖ್ಯಮಂತ್ರಿಗಳು ಹೇಳಲಿ.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ಮಾನ್ಯ ನಮ್ಮ ಸಕ್ಕರೆ ಸಚಿವರು ಶುಕ್ರವಾರದಂದು ಬಹಳ ಧೀರ್ಘವಾಗಿ ಉತ್ತರನ್ನು ಕೊಟ್ಟಿದ್ದಾರೆ. ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಕಬ್ಬಿನ ಬಾಕಿ ಹಣವನ್ನು ಈಗಲೇ ಕೊಡಿಸಬೇಕು, ಅಸೆಂಬ್ಲಿ ಮುಗಿಯುವುದರೊಳಗೆ ಕೊಡಿಸಬೇಕು ಎಂದು ಹೇಳಿದ್ದಾರೆ.

ಅಧ್ಯಕ್ಷರು:– ಅದನ್ನು ಹೇಳಲಿಲ್ಲ.

ಶ್ರೀ ಸಿದ್ದರಾಮಯ್ಯ:– ಹೌದು, ಹೌದು ಬಹಳ ಜನ ಹೇಳಿದರು, ಹೇಳಲಿಲ್ಲವೇನಪ್ಪ?

ಶ್ರೀ ಲಕ್ಷ್ಮಣ್ ಎಸ್. ಸವದಿ:– ಕೊಡಿಸುತ್ತಾರೆನ್ನುವ ಭರವಸೆ ಎಂದು ಹೇಳಲಾಗಿದೆ.

ಶ್ರೀ ಸಿದ್ದರಾಮಯ್ಯ:– ಆ ಎರಡೂ ಒಂದೇ ಪದಗಳು, ಕೊಡಿಸಬೇಕೆಂದು ಹೇಳಿದ್ದಾರೆ, ಅದು ಅಸಾಧ್ಯವಾದ ಮಾತು. ಎರಡನೆಯದಾಗಿ ಮಹದೇವ ಪ್ರಸಾದ್ ಅವರು ಹೇಳಿದಂತೆ FRP ಪ್ರಕಾರ ₹ 2,000 ಕೊಡಬೇಕೆಂದಾಗಿದೆ, ಬಹುತೇಕವಾಗಿ ಎಲ್ಲಾ sugar

factoryಯವರು ಕೊಟ್ಟಿದ್ದಾರೆ, ಇನ್ನು ಉಳಿದ ₹ 400ನಲ್ಲಿ ಈ ಡಿಸೆಂಬರ್ ಅಂತ್ಯದೊಳಗಡೆ ₹ 200 ಕೊಡಿಸುತ್ತೇವೆಂದು ಹೇಳಿದ್ದಾರೆ, ಕೊಡಿಸುವುದಕ್ಕೆ ಹೇಳಿದ್ದೇವೆ, ಅದನ್ನು ಕೊಡುತ್ತಾರೆ. ಕೊಡಲಿಕ್ಕೆ ಹೇಳಿದ್ದೇವೆ. ಕೊಡುತ್ತಾರೆ. 2300 ರೂ. ಆಯಿತು. ಇನ್ನು ಉಳಿದಂತಹ 200 ರೂ. ಈ 200 ರೂ. ಅನ್ನು ಕಬ್ಬು ಅರಿಯತಕ್ಕಂತಹ ಸೀಸನ್ ಇರುವುದರಿಂದ ಅದು ಮಾರ್ಚ್‌ವರೆಗೆ ಹೋಗುವುದರಿಂದ ಎಲ್ಲಾ ಸಕ್ಕರೆ ಕಾರ್ಖಾನೆಯವರು ಕಬ್ಬು ಅರಿಯುವುದರಲ್ಲಿ ನಿರತರಾಗಿದ್ದಾರೆ. ನಮ್ಮ ಹತ್ತಿರ ಅನೇಕ ಜನ ರೈತರು ಬಂದು ನಮಗೆ ತಕ್ಷಣ ಕಬ್ಬು ಅರಿಯುವುದಕ್ಕೆ ಪ್ರಾರಂಭ ಮಾಡಿ ಎಂದು ಹೇಳಿದರು. ನವೆಂಬರ್ ಹಾಗೂ ಡಿಸೆಂಬರ್ ತಿಂಗಳುಗಳಲ್ಲಿ ಅನೇಕ ಕಡೆ ಚಳುವಳಿಗಳನ್ನು ಮಾಡಿದರು. ಮಾನ್ಯ ಕಾರಜೋಳರವರು ಬಾಗಲಕೋಟೆ ಚಳುವಳಿಯಲ್ಲಿ ಇವರೇ ನೇತೃತ್ವ ವಹಿಸಿದ್ದರು. ಮಾನ್ಯ ಮಹದೇವ ಪ್ರಸಾದ್‌ರವರು ಬೆಳಗಾಂನಲ್ಲಿ ರೈತ ಮುಖಂಡರ ಜೊತೆಯಲ್ಲಿ ಹಾಗೂ ಸಕ್ಕರೆ ಕಾರ್ಖಾನೆಯವರ ಜೊತೆಯಲ್ಲಿ ಸಭೆ ಮಾಡಿ ಎಲ್ಲರ ಜೊತೆ ಮಾತುಕತೆ ಮಾಡಿ ಅಲ್ಲಿ ಕೂಡ ಏನು ತೀರ್ಮಾನ ಆಯಿತು ಎಂದರೆ ಮೊದಲು ಕಬ್ಬು ಅರಿಯುವುದು ಪ್ರಾರಂಭವಾಗಬೇಕು. ಏಕೆಂದರೆ, ಈಗಾಗಲೇ ಒಂದು ಒಂದುವರೆ ತಿಂಗಳು ಆಗಿ ಬಿಟ್ಟಿದೆ, ಕಬ್ಬು ಅರಿಯದೆ ಕಬ್ಬು ಒಣಗಿ ಹೋಗುತ್ತಿದೆ. ಕಬ್ಬು ಒಣಗಿ ಹೋಗುವುದರಿಂದ ಇಳುವರಿ ಕಡಿಮೆಯಾಗುತ್ತದೆ. ಸಕ್ಕರೆ ಇಳುವರಿ ಕೂಡ ಕಡಿಮೆ ಆಗಿ ಅದರಿಂದ ರೈತರಿಗೆ ನಷ್ಟವಾಗುತ್ತದೆ. ಮೊದಲು ಇದನ್ನು ಪ್ರಾರಂಭ ಮಾಡಿಸಿ ಎಂದು ಹೇಳಿದರು. ನಾವು ಆ ಮಾತುಕತೆ ಎಲ್ಲಾ ಆಡಿ ಆಗಿತ್ತು. ಎಲ್ಲಿಯೂ ಕೂಡ ಸರ್ಕಾರ ವಿಳಂಬ ಮಾಡಿರುವುದು ಇಲ್ಲ. ಏಕೆಂದರೆ 11.12.2013 ರಲ್ಲಿ ಕೋರ್ಟಿನಿಂದ ಸಕ್ಕರೆ ಕಾರ್ಖಾನೆಯವರು ಒಂದು ಆದೇಶ ತೆಗೆದುಕೊಂಡು ಬಂದರು. ಆದೇಶದಲ್ಲಿ ಏನು ಹೇಳಿದ್ದರು ಎಂದರೆ, ಸಕ್ಕರೆ ಕಾರ್ಖಾನೆಯವರನ್ನು ಕರೆದು ಮಾತುಕತೆ ಮಾಡಿ in the meanwhile ಯಾವುದೇ coercive measures ತೆಗೆದುಕೊಳ್ಳಬಾರದು ಎಂದು ಬಹಳ ಸ್ಪಷ್ಟವಾಗಿ ಕೋರ್ಟಿನ ಆದೇಶ ಇದೆ. ಹಾಗಾಗಿ ನಾವು ಏನು ಕ್ರಮ ತೆಗೆದುಕೊಳ್ಳುವುದಕ್ಕಾಗಲಿಲ್ಲ. ನಾನು ಎರಡು

ಬಾರಿ ಸಕ್ಕರೆ ಕಾರ್ಖಾನೆಯವರನ್ನು ಕರೆದು ಮಾತನಾಡಿದೆ. ಆದರೆ ಮಾತುಕತೆ ವಿಫಲವಾಯಿತು. ಮಾತುಕತೆ ವಿಫಲವಾದುದನ್ನು ನಾವು ಕೋರ್ಟಿಗೆ ತಿಳಿಸಿದೆವು. ಈ ತರಹ ಆಗಿದೆ, ಮಾತುಕತೆ ವಿಫಲವಾಯಿತು ಅವರು ಒಪ್ಪಿಕೊಳ್ಳಲಿಲ್ಲವೆಂದು ತಿಳಿಸಿದೆವು. ಆ ಮೇಲೆ ಕೋರ್ಟಿನವರು FRP ಕೊಡಬೇಕು, ಕೊಡದೆ ಇರುವವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದರು. ಆ ಮೇಲೆ ನಾವೆಲ್ಲಾ ನೋಟಿಸ್ ಕೊಟ್ಟೆವು. ನೋಟಿಸ್ ಕೊಟ್ಟ ಮೇಲೆ 22.05.2014ರಲ್ಲಿ ಮತ್ತೆ ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬಂದರು. ಅದು ಆ ಸ್ಟೇ arguments ಎಲ್ಲಾ ಆಗಿ orders ಆಗಬೇಕಾದರೆ 06.11.2014 ಆಯಿತು. 11.12.2013 ರಿಂದ 6.11.2014ರವರೆಗೆ ಸುಮಾರು 11 ತಿಂಗಳ ಕಾಲ ಈ ವಿಷಯ ಹೈಕೋರ್ಟಿನ ಮುಂದೆ ಇತ್ತು. 06.11.2014 ರಲ್ಲಿ ಕಳೆದ ತಿಂಗಳು ನವೆಂಬರ್ ತಿಂಗಳಲ್ಲಿ ಆದೇಶ ಆಯಿತು. ನೀವು ಕೊಡಲೇಬೇಕೆಂದು ಆದೇಶ ಆಯಿತು. ನಾವು ಅದಾದ ಮೇಲೆ ಸಕ್ಕರೆ ಕಾರ್ಖಾನೆಯವರನ್ನು ಕರೆದು ಮಾತನಾಡಿ ಅವರಿಗೆ ನೋಟಿಸ್ ಕೊಡತಕ್ಕಂಥದ್ದು ಎಲ್ಲಾ ಮಾಡಿದ್ದೇವೆ. ಅವರು ಡಿಸೆಂಬರ್ 30 ರೊಳಗೆ 200 ರೂ. ಪಾವತಿ ಮಾಡುತ್ತೇವೆ, ಇನ್ನು ಉಳಿದದ್ದು ಕಂತಿನ ಮೂಲಕ ಕೊಡುತ್ತೇವೆಂದು ಹೇಳಿದ್ದಾರೆ. ಆದರೂ ಈ ಮಾರ್ಚ್ ತಿಂಗಳ ಕಬ್ಬು ಅರಿಯುವ ಸೀಸನ್ ಮುಗಿದ ಮೇಲೆ ಅವರನ್ನು ಜೊತೆ ಕರೆದು ಮಾತನಾಡಿ ಆದಷ್ಟು ಜಾಗ್ರತೆ ಎರಡು ಕಂತಿನಲ್ಲಿ ಉಳಿದ 200 ರೂ. ಕೊಡಿಸಲಿಕ್ಕೆ ಸರ್ಕಾರ ಎಲ್ಲಾ ಪ್ರಮಾಣಿಕ ಪ್ರಯತ್ನ ಮಾಡುತ್ತದೆ. ಒಂದು ವೇಳೆ ಅವರು ಒಪ್ಪದೆ ಹೋದರೆ ನಾವು ಕಾನೂನು ರೀತಿ ಏನೇನು ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಆ ಎಲ್ಲಾ ಕ್ರಮಗಳನ್ನು ತೆಗೆದುಕೊಂಡು ಉಳಿದಿರತಕ್ಕಂತಹ 200 ರೂ.ಗಳನ್ನು ಕೊಡಿಸತಕ್ಕಂತಹ ಪ್ರಯತ್ನ ಮಾಡುತ್ತೇವೆ. Practical difficulties ಏನಿವೆ, ಒಂದು ಕಡೆ ಅವರು ನಮಗೆ ಬಾಕಿ ಕೊಡುವುದು ಕಷ್ಟ ಎಂದು ವಾದ ಮಾಡುತ್ತಿದ್ದಾರೆ. ಇನ್ನೊಂದು ಕಡೆ ಕಬ್ಬು ಬೆಳೆಗಾರರು ಆದಷ್ಟು ಜಾಗ್ರತೆ ಕಬ್ಬು ಅರಿಯಬೇಕು ಪೇಮೆಂಟ್ ಬೇಕಾದರೆ ಸ್ವಲ್ಪ ನಿಧಾನವಾದರೂ ಪರವಾಗಿಲ್ಲ ಎನ್ನತಕ್ಕಂತಹ ಭಾವನೆ ವ್ಯಕ್ತ ಮಾಡುತ್ತಿದ್ದಾರೆ. ಇದು ಒಂದು.

In the meanwhile ನಮ್ಮ ಬೆಳಗಾವಿ ಸದನ ಪ್ರಾರಂಭವಾದ ಮೇಲೆ ನಾನು ಮೂರು ರೈತ ಸಂಘಟನೆಗಳ ಜೊತೆ ಮಾತನಾಡಿದ್ದೇನೆ. ಒಂದು ಕೋಡಿಹಳ್ಳಿ ಚಂದ್ರಶೇಖರ್‌ರವರ ರೈತ ಸಂಘಟನೆ ಗುಂಪು, ಇನ್ನೊಂದು ಕುರುಬೂರು ಶಾಂತ ಕುಮಾರ ಅವರ ಜೊತೆ ಕೂಡ ಮಾತುಕತೆ ಮಾಡಿದ್ದೇನೆ. ಬಾಬಾಗೌಡ ಪಾಟೀಲ್ ಮತ್ತು ಶಶಿಕಾಂತ ನಾಯಕ್ ಅವರಿಬ್ಬರೂ BJP ಯಲ್ಲಿಯೇ ಇರತಕ್ಕಂತಹವರು ಅವರು ರೈತ ಸಂಘಟನೆ ನಡೆಸುತ್ತಿದ್ದಾರೆ. ಆ ಗುಂಪಿನವರ ಜೊತೆ ಮಾತನಾಡಿದ್ದೇನೆ. ಈಗ ನಾನು ಏನು ಹೇಳಿದೆ, ಅವೆಲ್ಲವನ್ನೂ ನಾನು ಅವರಿಗೆ ವಿವರಿಸಿ ಹೇಳಿದ್ದೇನೆ. ಅವರು ನೀವು ಆದಷ್ಟು ಜಾಗ್ರತೆ ಕೊಡಿಸಿ ಎಂದು ಒಪ್ಪಿಕೊಂಡು ಹೋಗಿದ್ದಾರೆ. ಆದರೆ ಇಲ್ಲಿ ಮಾನ್ಯ ಸದಸ್ಯರು ಇಲ್ಲ ಈಗಲೇ ಕೊಡಿ, ನಾಳೆನೇ ಕೊಡಿ, ನಾಡಿದ್ದು ಕೊಡಿ, ಅಸೆಂಬ್ಲಿ ಆದ ತಕ್ಷಣ ಕೊಡಿಸಿ ಎಂದು ಒತ್ತಾಯ ಮಾಡತಕ್ಕಂಥದ್ದು ಅದು ಸಾಧುವಾದುದಲ್ಲ ಮತ್ತು ವಾಸ್ತವಿಕವಾದುದು ಅಲ್ಲ. ಆದರೆ ಇಷ್ಟು ಮಾತ್ರ ಹೇಳುತ್ತೇನೆ, ನಾವೇನು ₹ 2,500 ಕೊಡಿಸುತ್ತೇವೆಂದು ಸದನದಲ್ಲಿ ಮಾತು ಕೊಡಿಸಿದ್ದೇವೆ ಅದಕ್ಕೆ ಬದ್ದರಾಗಿದ್ದೇವೆ. ನಾವು 2,500 ರೂ. ಕೊಡಿಸಿಯೇ ಕೊಡಿಸುತ್ತೇವೆ. ಅದಕ್ಕೆ ಯಾವುದೇ ಮುಲಾಜಿಲ್ಲ. ಮಾನ್ಯ ಜಗದೀಶ್ ಶೆಟ್ಟರ್‌ರವರು ಸಕ್ಕರೆ ಕಾರ್ಖಾನೆಗಳವರ ಜೊತೆ ಶಾಮೀಲಾಗಿದ್ದಾರೆ, ಅವರ ಲಾಬಿಗೆ ಒಳಗಾಗಿದ್ದಾರೆ ಎಂದು ಹೇಳಿದರು ಮಾನ್ಯ ಜಗದೀಶ್ ಶೆಟ್ಟರ್‌ರವರೇ ಯಾವುದೇ ಲಾಬಿಗೆ ಒಳಗಾಗತಕ್ಕಂತಹ ಸರ್ಕಾರ ಅಲ್ಲ ಇದು. ಯಾರ ಮುಲಾಜಿಗೂ ಒಳಗಾಗತಕ್ಕಂತಹ ಸರ್ಕಾರ ಅಲ್ಲ. ಯಾವುದೋ ಆಸೆ ಆಮಿಷೆಗಳಿಗೆ ಒಳಗಾಗತಕ್ಕಂತಹ ಸರ್ಕಾರ ಅಲ್ಲ. ಇದರಲ್ಲಿ ನಾವು ಬಹಳ ಸ್ಪಷ್ಟವಾಗಿ ಹೇಳುತ್ತೇವೆ, 2,500 ರೂ. ಕೊಡಿಸಿಯೇ ಕೊಡಿಸುತ್ತೇವೆ ಮಾನ್ಯ ಸದಸ್ಯರುಗಳು I think you are all convinced ಎಂದು ಅನ್ನಿಸುತ್ತದೆ. ಆದ್ದರಿಂದ ಈ ಧರಣಿಯನ್ನು ವಾಪಸ್ ತೆಗೆದುಕೊಳ್ಳಬೇಕೆಂದು ನನ್ನ ಮನವಿ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಪ್ರಶ್ನೆ, 200 ರೂ. ಮಾರ್ಚ್ ನಂತರ ಕೊಡುತ್ತೇವೆಂದು ಹೇಳಿದರು, ಮೊದಲು ಮಾನ್ಯ ಮಹದೇವ ಪ್ರಸಾದ್‌ರವರು ಮಾರ್ಚ್ ಒಳಗಾಗಿ ಕೊಡಿಸುತ್ತೇನೆಂದು

ಹೇಳಿದರು. ಅದು ಹೋಯಿತು. ಮಾರ್ಚ್ ನಂತರ ಅಲ್ಲ specific ಆಗಿ ಯಾವುದಾದರೂ ಒಂದು ಸ್ಪಷ್ಟೀಕರಣ ಕೊಡಲಿ.

ಅಧ್ಯಕ್ಷರು:– ಮಾನ್ಯ ಜಗದೀಶ್ ಶೆಟ್ಟರ್‌ರವರೇ ಒಂದು ಮಾತು ಕೇಳುತ್ತೇನೆ. ಕೊಡಿಸಬೇಕೆನ್ನುವ ಕಾರಣಕ್ಕಾಗಿ ಸಕ್ಕರೆ ಕಾರ್ಖಾನೆಯನ್ನು ಜಪ್ತಿ ಮಾಡುತ್ತಾರೆ. ಕ್ರಷಿಂಗ್ ನಿಲ್ಲುತ್ತದೆ. ಆಗ ರೈತರ ಪರವಾಗಿ ನೀವೇನು ಹೇಳುತ್ತೀರಿ?

ಶ್ರೀ ಜಗದೀಶ್ ಶೆಟ್ಟರ್:– ಮಾರ್ಚ್‌ವರೆಗೆ ಎಂದು ಹೇಳಿದಿರಿ, ಮಾರ್ಚ್ ಆದ ಮೇಲೆ ಒಂದು ತಿಂಗಳು, ಎರಡು ತಿಂಗಳು ಎಂದು ಅವರು specific ಆಗಿ ಹೇಳಲಿ.

ಶ್ರೀ ಸಿದ್ದರಾಮಯ್ಯ:– ಕುಳಿತುಕೊಂಡು ಮಾತನಾಡಿ ಮಾರ್ಚ್ ಆದ ಮೇಲೆ ಎರಡು installment ನಲ್ಲಿ ಅವರು ಕೊಡುತ್ತೇವೆಂದು ಹೇಳಿದ್ದಾರೆ. ದಿನಾಂಕ ನಿಗದಿ ಮಾಡಿ ಕೊಡಿಸುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:– ಕೆಲವು ಕಾರ್ಖಾನೆಗಳವರು ₹ 1,800 ಕೊಟ್ಟಿದ್ದಾರೆ. ಅದಕ್ಕಿಂತ ಹೆಚ್ಚಿಗೆ ಕೊಟ್ಟಿಲ್ಲ. ಇದುವರೆಗೆ ಅವರ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. Immediate ಆಗಿ action ತೆಗೆದುಕೊಳ್ಳಬಹುದು. 1,800 ರೂ. ಮೇಲೆ ಕೆಲವು ಕಾರ್ಖಾನೆಗಳವರು ಕೊಟ್ಟಿಲ್ಲ. ಅವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಿ.

ಅಧ್ಯಕ್ಷರು:– ದಯವಿಟ್ಟು ಪೂರೈಸಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ನಿಮ್ಮ FRP ದರ ಕಳೆದ ವರ್ಷ 2,100 ರೂ. ಏನು ನಿಗದಿ ಮಾಡಿದ್ದಿರಿ ನವೆಂಬರ್ 30ನೇ ತಾರೀಖಿನ ಒಳಗೆ 2,100 ರೂ. ಕೊಡಬೇಕು ಎನ್ನತಕ್ಕಂಥದ್ದನ್ನು ಕಬ್ಬು ಅರಿಯುವುದಕ್ಕೆ ಅವರಿಗೆ ಡೈರೆಕ್ಷನ್ ಕೊಟ್ಟಾಗ ಕಾರ್ಖಾನೆ ಮಾಲೀಕರಿಗೆ ಹೇಳಿದಿರಿ. ನವೆಂಬರ್ 30ರೊಳಗೆ 2,100 ರೂ. ಎಲ್ಲಾ ಕಾರ್ಖಾನೆಗಳು ಕೊಡಬೇಕು. ನಾನು ಮೊನ್ನೆ ತಮ್ಮನ್ನು ಕೇಳಿದೆ 2,100 ರೂ. ಅನ್ನು ಎಷ್ಟು

ಕಾರ್ಖಾನೆ ಮಾಲೀಕರು ಕೊಟ್ಟಿದ್ದಾರೆ. ನಮಗಿರುವ ಮಾಹಿತಿ ಪ್ರಕಾರ 1,650 ರೂ. ನಿಂದ 2,000 ರೂ. ವರೆಗೆ ಕೊಟ್ಟಿದ್ದಾರೆ.

ಅಧ್ಯಕ್ಷರು:– ಪಟ್ಟಿ ಕೊಡುವುದಕ್ಕೆ ಹೇಳಿದ್ದೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ನವೆಂಬರ್ 30ರೊಳಗೆ ಎಲ್ಲಿ ಕೊಟ್ಟಿದ್ದಾರೆ? ಅವರು ಕೊಡದೇ ಇದ್ದರೆ ಕಾರ್ಖಾನೆ ಜಪ್ತಿ ಮಾಡಿಸಿದರೆ ಏನು ಹೇಳುತ್ತೀರಿ ಎಂದು ಹೇಳಿದಿರಿ. ಮೊನ್ನೆ ಉತ್ತರ ಕೊಡುವಾಗ ಘಟಪ್ರಭಾ ಸಕ್ಕರೆ ಕಾರ್ಖಾನೆ ಬಗ್ಗೆ ಹೇಳಿದರು. ನಾವು auction ಗೆ ಹಾಕಿದರೆ ಘಟಪ್ರಭಾ ಸಕ್ಕರೆ ಕಾರ್ಖಾನೆ ಯಾರೂ ತೆಗೆದುಕೊಳ್ಳುವುದಕ್ಕೆ ಬರಲಿಲ್ಲವೆಂದು ಹೇಳಿದರು. ಯಾರೂ ತೆಗೆದುಕೊಳ್ಳುವುದಕ್ಕೆ ಬರದೇ ಇದ್ದರೆ ಸರ್ಕಾರದ ಕಾನೂನಿನಲ್ಲಿ ಯಾವುದಾದರೂ auction ಹಾಕಿದಾಗ ಸರ್ಕಾರವೇ ಒಂದು ರೂ. ಮೀಸಲಿಟ್ಟು ಆ ಕಾರ್ಖಾನೆ ವಶಪಡಿಸಿಕೊಳ್ಳಬೇಕು. ನೀವು ಅದೂ ಮಾಡಲಿಲ್ಲ. ನೀವು ಜಪ್ತಿ ಮಾಡಿಕೊಂಡು ಏನು ಮಾಡುತ್ತೀರಿ? ಘಟಪ್ರಭಾ ಸಕ್ಕರೆ ಕಾರ್ಖಾನೆಯ ಹಣೆಬರಹವನ್ನು ಈ ಮಟ್ಟಕ್ಕೆ ತಂದು ಇಟ್ಟಿದ್ದೀರಿ. Auction ಹಾಕಿದರೆ ಯಾರೂ ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ಮೊನ್ನೆ ಬಾಬಾ ಗೌಡ ಪಾಟೀಲರು ಮಾನ್ಯ ಮಂತ್ರಿಗಳನ್ನು ಭೇಟಿ ಮಾಡಿದಾಗ ಅವರಿಗೆ ನೀವು ಮಾತು ಕೊಟ್ಟಿರಿ ಕಳೆದ ವರ್ಷ ಅರಿದಿರತಕ್ಕಂತಹ ಕಬ್ಬಿನ ಹಣ ಡಿಸೆಂಬರ್ 30ರೊಳಗೆ ಹಣ ವಾಪಸ್ ಕೊಡಿಸುತ್ತೇವೆಂದು ಹೇಳಿದಿರಿ. ನೀವೇ ಕಾನೂನು ತಂದಿದ್ದೀರಿ. 14 ದಿವಸಗಳೊಳಗೆ ಕಾರ್ಖಾನೆಗೆ ಕಬ್ಬನ್ನು ಸರಬರಾಜು ಮಾಡತಕ್ಕಂತಹ ರೈತರಿಗೆ ದುಡ್ಡು ಕೊಡದೇ ಇದ್ದರೆ 15% ಬಡ್ಡಿ ತರಹ ಆ ಕಾರ್ಖಾನೆ ಮಾಲೀಕರು ದುಡ್ಡು ಕೊಡಬೇಕು. ಬಡ್ಡಿ ವಿಷಯದಲ್ಲಿ ಏನು ಮಾಡಿದಿರಿ? ಬಡ್ಡಿ ಎಷ್ಟು ಕೊಡಿಸುತ್ತೀರಿ?

ಅಧ್ಯಕ್ಷರು:– ಕಾನೂನಿನಲ್ಲಿರುವುದನ್ನು ಕೊಡಲೇ ಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಒಂದು ವರ್ಷ ಆಯಿತು ಅಧ್ಯಕ್ಷರೆ, ಕಾನೂನು ತಂದಿರುವುದು 14 ದಿನದಲ್ಲಿ ಸರಬರಾಜು ಮಾಡಿದ ಮೇಲೆ ರೈತನಿಗೆ ಬಡ್ಡಿ ಸಮೇತ ದುಡ್ಡು ಕೊಡಬೇಕು. ಒಂದು ವರ್ಷವಾದರೂ ದುಡ್ಡು

ಕೊಟ್ಟಿಲ್ಲ. ರೈತನಿಗೆ ಬಡ್ಡಿ ದುಡ್ಡು ಕೊಡಿಸುತ್ತೀರೋ, ಇಲ್ಲವೇ ಎಂದು ಹೇಳಿ. ನೀವು ಇದಕ್ಕೆಲ್ಲಾ clarification ಕೊಡಲಿಲ್ಲ. 2,200 ರೂ. FRP ಮಾಡಿಕೊಂಡರು. ಇವರು ಹೋದ ಬಾರಿ 150 ರೂ. Incentive ಕೊಟ್ಟರು.

ಅಧ್ಯಕ್ಷರು:– ಸಮಸ್ಯೆಗಳು ಸಾವಿರರಾರು ಇರುತ್ತವೆ. ಅದೆಲ್ಲಾ ಈಗ ಬೇಡ. ಈಗ ನಮ್ಮ ಮುಂದೆ ಇರುವ ಸಮಸ್ಯೆ ಸೀಮಿತವಾಗಿರತಕ್ಕಂಥದ್ದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಕಳೆದ ವರ್ಷ 150/– ರೂ.ಗಳು ಎಂದು ಘೋಷಣೆ ಮಾಡಿದಿರಿ. ಈ ವರ್ಷ ಆ ವಿಷಯದ ಬಗ್ಗೆ ಚರ್ಚೆಯೇ ಇಲ್ಲ. ಆ ವಿಷಯದಲ್ಲಿ ಸರ್ಕಾರದಿಂದ ರೈತರಿಗೆ ಏನು ಕೊಡುತ್ತೀರಿ ಎಂಬ ಬಗ್ಗೆ ಹೇಳಲಿಲ್ಲ. ಈ ವರ್ಷ ಕಳೆದ ವರ್ಷಕ್ಕಿಂತ ಹೆಚ್ಚು ಕಷ್ಟಪರಿಸ್ಥಿತಿಯಲ್ಲಿ ರೈತರಿದ್ದಾರೆ. ಇವತ್ತು ಬೆಳೆ ಬೆಳೆಯತಕ್ಕಂಥದ್ದಕ್ಕೆ ವೆಚ್ಚ ಜಾಸ್ತಿಯಾಗಿದೆ. ಇವತ್ತು ಸರ್ಕಾರದಿಂದ ಯಾವುದೇ ಪ್ರೋತ್ಸಾಹ ಧನ ಕೊಡುವ ಬಗ್ಗೆ ಘೋಷಣೆಯಾಗಲಿಲ್ಲ. ಯಾವುದನ್ನೂ ಕೊಡುವುದಿಲ್ಲವೆಂದು ಹೇಳಿಬಿಟ್ಟಿದ್ದೀರಿ. ಈ ರೀತಿಯಾದರೆ ರೈತರು ಈ ವಿಷಯದಲ್ಲಿ ಏನು ಮಾಡಬೇಕು ಹೇಳಿ. ಸರ್ಕಾರ ಈ ರೀತಿ vague ಆಗಿ ಉತ್ತರವನ್ನು ಕೊಟ್ಟುಕೊಂಡು ಮಾರ್ಚ್‌ನಲ್ಲಿ ಕೊಡುತ್ತೇವೆ ಎನ್ನುವುದು, ಒಂದು ವರ್ಷದಿಂದ ನಿಮ್ಮ ಕೈಯಲ್ಲಿ ಸಾಧ್ಯವಾಗದೇ ಇರುವುದು, ಈ ರೀತಿಯಾದರೆ ಮಾರ್ಚ್ ತಿಂಗಳೊಳಗೂ ನಿಮ್ಮ ಕೈಯಲ್ಲಿ ಕೊಡಿಸುವುದಕ್ಕೆ ಆಗುವುದಿಲ್ಲವೆಂದು ಸತ್ಯ ಹೇಳುತ್ತಿದ್ದೇನೆ. ಆದುದರಿಂದ ನಮ್ಮ ಡಿಮ್ಯಾಂಡ್ ಇರತಕ್ಕಂಥದ್ದು ಮೊದಲು ಸರ್ಕಾರವೇ ರೈತನಿಗೆ ದುಡ್ಡನ್ನು ಕೊಟ್ಟುಬಿಡಲಿ. ಆಮೇಲೆ ನೀವು ಬೇಕಾದರೆ ಕಾರ್ಖಾನೆ ಮಾಲೀಕನ ಆಸ್ತಿಯನ್ನು ಜಪ್ತಿ ಮಾಡುತ್ತೀರೋ, ಏನು ಮಾಡುತ್ತೀರೋ ಮಾಡಿಕೊಂಡು ಅವರಿಂದ ನೀವು ವಸೂಲು ಮಾಡಿಕೊಳ್ಳಿ. ಇವೊತ್ತು ಸರ್ಕಾರದವರು ಕೊಟ್ಟಿರುವ ಉತ್ತರ ನಮಗೆ ಸಮರ್ಪಕವಾಗಿಲ್ಲ. ಸದನದ ಕಲಾಪ ನಡೆಯಬೇಕು ಎಂಬುದು ನಮ್ಮ ಉದ್ದೇಶವಾಗಿದೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ಸದನದ ಕಾರ್ಯಕಲಾಪಗಳು ನಡೆಯಬೇಕು ಎಂಬುದು ನಮ್ಮ

ಉದ್ದೇಶವಾಗಿದೆ. ಉತ್ತರ ಕರ್ನಾಟಕದ ಅಭಿವೃದ್ಧಿಗೆ ಸಂಬಂಧಿಸಿದ ಹಲವಾರು ವಿಷಯಗಳಿವೆ. ಆದರೆ ಇವರು ರೈತರಿಗೆ ಕೊಡಿಸಬೇಕಾಗಿರುವ ಹಣದ ಬಗ್ಗೆ ಈಗಾಗಲೇ ಹೇಳಿರುವ ಉತ್ತರವನ್ನೇ ಮತ್ತೆ ಮತ್ತೆ ಹೇಳುತ್ತಿದ್ದಾರೆ. ಅದನ್ನು ಬಿಟ್ಟು ಮತ್ತೆ ಬೇರೆ ಏನನ್ನೂ ಹೇಳುವುದಕ್ಕೆ ಇವರು ತಯಾರಿಲ್ಲ. ಇವರು ಸಕ್ಕರೆ ಲಾಭಿಗೆ ಮಣಿದಿದ್ದಾರೆ. ಹೀಗಿರುವುದರಿಂದಲೇ ಎಷ್ಟು ಅವಧಿಯೊಳಗೆ ವಸೂಲಿ ಮಾಡುತ್ತೇವೆನ್ನುವ ಬಗ್ಗೆ ಇಲ್ಲಿ ಹೇಳಿಲ್ಲ. ಇದರ ಬಗ್ಗೆ specific ಆಗಿ ಉತ್ತರ ಕೊಡುವುದಕ್ಕೆ ಇವರು ತಯಾರಿಲ್ಲ. ಇದನ್ನು ನಾವು protest ಮಾಡುತ್ತೇವೆ. ಮುಂದಿನ ಕಲಾಪಗಳು ನಡೆಯಬೇಕು ಎನ್ನುವ ದೃಷ್ಟಿಯಿಂದ ನಾವು ಸಭಾತ್ಯಾಗವನ್ನು ಮಾತ್ರ ಮಾಡುತ್ತಿದ್ದೇವೆ. ನಿಜವಾಗಿಯೂ ರೈತರಿಗೆ ಇವರು ಮಾಡಿರುವಂಥ ಅನ್ಯಾಯವನ್ನು ನೋಡಿದರೆ ನಾವು ಸದನದ ಬಾವಿಯಲ್ಲಿ ಧರಣಿನಿರತರಾಗಲೇಬೇಕು. ಆದರೆ ಸದನದ ಮುಂದಿನ ಕಾರ್ಯಕಲಾಪ ಸರಿಯಾಗಿ ನಡೆಯಬೇಕು, ಉತ್ತರ ಕರ್ನಾಟಕದ ಅಭಿವೃದ್ಧಿಯ ಹಲವಾರು ವಿಚಾರಗಳು ಚರ್ಚೆಗೆ ಬರಬೇಕು ಎನ್ನುವ ದೃಷ್ಟಿಯಿಂದ ಇವತ್ತು protest ಮಾಡಿ ಸಭಾತ್ಯಾಗವನ್ನು ಮಾಡುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ಸರ್ಕಾರದ ಉತ್ತರ ಸರಿಯಿಲ್ಲ. ಆದುದರಿಂದ ಇದನ್ನು protest ಮಾಡಿ ನಮ್ಮ ಪಕ್ಷದವರು ಸಭಾತ್ಯಾಗವನ್ನು ಮಾಡುತ್ತೇವೆ.

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಸಭಾತ್ಯಾಗವನ್ನು ಮಾಡಿದರು)

ಅಧ್ಯಕ್ಷರು:– ಮಾನ್ಯ ಸಚಿವರು, ಸರ್ಕಾರದವರು ಸದರಿ ವಿಷಯದ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಿ ಸಮಯಬದ್ಧವಾಗಿ ಹಣವನ್ನು ಪಾವತಿ ಮಾಡಿಸಿ ಎಂದು ತಮ್ಮ ಪರವಾಗಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ತಮ್ಮ ನಿಲುವು ಮತ್ತು ನಮ್ಮ ಪಕ್ಷದ ನಿಲುವು ಕೂಡ ಅದೇ ರೀತಿಯದ್ದಾಗಿದೆ. ಆದರೆ ಇವತ್ತು ಸರ್ಕಾರ ಸಮರ್ಪಕವಾದಂಥ ಉತ್ತರವನ್ನು ಕೊಟ್ಟಿಲ್ಲ. ಇವತ್ತು ರೈತರಿಗೆ ರಕ್ಷಣೆ

ಕೊಡತಕ್ಕಂಥ ಸರ್ಕಾರವಲ್ಲ ಎನ್ನತಕ್ಕಂಥದ್ದನ್ನು ಅವರ ಉತ್ತರದಿಂದ ನಾವು ಮನಗಾಣಬಹುದು. ಆದರೆ ಇನ್ನೂ ಹಲವಾರು ವಿಚಾರಗಳು ಚರ್ಚೆಯಾಗಬೇಕು ಎನ್ನುವ ಹಿನ್ನಲೆಯೊಳಗೆ ಸದನದ ಕಲಾಪಗಳು ಇವತ್ತು ಸ್ಥಗಿತವಾಗಬಾರದು ಎನ್ನುವ ದೃಷ್ಟಿಯಿಂದ ನಾವು ಇವತ್ತು ಸಭಾತ್ಯಾಗವನ್ನು ಮಾಡುವ ನಿರ್ಣಯವನ್ನು ಮಾಡಿಕೊಂಡಿದ್ದೇವೆ. ನಮಗೆ ಸರ್ಕಾರದ ಉತ್ತರದ ಬಗ್ಗೆ ನಂಬಿಕೆಯಿಲ್ಲ. ಈ ಸರ್ಕಾರ ರೈತ ವಿರೋಧಿ ಸರ್ಕಾರವೆಂದು ಹೇಳಿ ಸಭಾತ್ಯಾಗವನ್ನು ಮಾಡುತ್ತೇವೆ.

(ಈ ಹಂತದಲ್ಲಿ ಜೆ.ಡಿ.(ಎಸ್) ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು)

4. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಅಧ್ಯಕ್ಷರು:– ಮೊದಲನೆಯ ಪ್ರಶ್ನೆ ಭೂಸನೂರು ರಮೇಶ್ ಬಾಳಪ್ಪನವರದ್ದು, ಆದರೆ ಅವರು ಈಗ ಇಲ್ಲ. ಮುಂದಿನ ಪ್ರಶ್ನೆ ಭೀಮಾನಾಯಕರಿಗೆ ಸಂಬಂಧಪಟ್ಟಿರುವುದಕ್ಕೆ ಇನ್ನೂ ಉತ್ತರ ಬಂದಿಲ್ಲ. ಮುಂದಿನ ಪ್ರಶ್ನೆ ಎಂ.ಟಿ.ಬಿ. ನಾಗರಾಜ್, ಆದರೆ ಅವರು ಈಗ ಇಲ್ಲ. ಮುಂದಿನ ಮುಕ್ಟುಲ್ ಸಾಭ್‌ರವರ ಪ್ರಶ್ನೆಗೆ ಉತ್ತರಿಸಲು ಕಾಲಾವಕಾಶವನ್ನು ಕೇಳಲಾಗಿದೆ. ಇತರ ಪ್ರಶ್ನೆಗಳನ್ನು ಕೇಳಿರುವ ಮಾನ್ಯ ಸದಸ್ಯರಾದ ಅರವಿಂದ್ ಚಂದ್ರಕಾಂತ್ ಪಾಟೀಲ್, ಕೆ.ಜಿ. ಬೋಪಯ್ಯ, ಹೆಚ್.ಸಿ. ಬಾಲಕೃಷ್ಣರವರು ಈಗ ಇಲ್ಲ. ಮಾನ್ಯ ಸದಸ್ಯರಾದ ಮಂಕಾಳ ಸುಬ್ಬವೈದ್ಯರವರ ಪ್ರಶ್ನೆ ವರ್ಗಾವಣೆಯಾಗಿದೆ. ರಫೀಕ್ ಅಹಮ್ಮದ್‌ರವರ ಪ್ರಶ್ನೆಗೆ ಉತ್ತರಿಸಲು ಕಾಲಾವಕಾಶ ಕೇಳಿದ್ದಾರೆ. ಮಾನ್ಯ ಶಿವಲಿಂಗೇಗೌಡರ ಪ್ರಶ್ನೆಗೆ ಉತ್ತರ ಬಂದಿಲ್ಲ. ಜೊಲ್ಲೆ ಶಶಿಕಲಾ ಗೈರು ಹಾಜರಿ. ಪಾಟೀಲ್ ಎ.ಎಸ್. ನಡಹಳ್ಳಿಯವರೆ ಪ್ರಶ್ನೆ ಕೇಳಿ.